ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಬಾಗಲಕೋಟೆ ಮುಳುಗುವ ಅಪಾಯ ಬರುವುದು ಸೆಕೆಂಡ್ ಸ್ಟೇಜ್ ನಲ್ಲಿ ಎಂದು ಆಗಲೇ ಹೇಳಿದ್ದೇನೆ. ಈಗ ನಾವು ತೆಗೆದುಕೊಂಡಿರುವುದು ಫಸ್ಟ್ ಸ್ಟೇಜ್ ಮಾತ್ರ. ಬಾಗಲಕೋಟೆ ಮುಳುಗತಕ್ಕದ್ದರ ಬಗ್ಗೆ ಏನು ಆನುಮಾನ ಇದೆ ಅದಕ್ಕೋಸ್ಕರ ಅಲ್ಲಿರತಕ್ಕಂತಹ ಎಂ.ಎಲ್.ಎ. ಗಳನ್ನು ಹಾಗೂ ಅಲ್ಲಿನ ಅಗ್ರಗಣ್ಯರನ್ನೂ ಸೇರಿಸಿ ಕಮಿಟಿಯನ್ನು ಮಾಡಿದ್ದು ಸರ್ಕಾರ ಈ ಬಗ್ಗೆ ಹೆಚ್ಚು ಗಮನವನ್ನು ಕೊಟ್ಟಿದೆ. ಆ ಕಮಿಟಿ ಕೂಡಾ ವಿಷಯವನ್ನು ತಿಳಿದುಕೊಂಡು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಆದರೆ ಈ ರಿಪೋರ್ಟ್‌ನ್ನು ಪರಿಶೀಲನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುವುದರ ಜೊತೆಗೆ ಅದಕ್ಕೆ ಒಂದು ಪ್ರೊಟೆಕ್ಷನ್ ವಾಲ್ ಅನ್ನು ಕಟ್ಟಿ ಒಂದು ನ್ಯೂ ಸಿಟಿ ಫಾರಂ ಮಾಡಬೇಕಾಗುತ್ತದೆ. ಅಲ್ಲಿ ಇರತಕ್ಕಂಥಾ ಜನರಿಂದಲೂ ಕೂಡ ಇದರ ಬಗ್ಗೆ ಮನವಿಗಳು ಬಂದಿವೆ, ಈ ವಿಷಯವನ್ನು ಸರ್ಕಾರಕ್ಕೂ ತಿಳಿಸಿದ್ದಾರೆ. ನಮಗೆ ಬಂದಿರತಕ್ಕಂಥಾ ಎಕ್ಸ್‌ಪರ್ಟ್ ಕಮಿಟಿ ಮೇರೆಗೆ ಸರ್ಕಾರವು ಅದರಲ್ಲಿರತಕ್ಕಂಥಾ ವಿಷಯಗಳನ್ನು ಪರಿಶೀಲಿಸಿ ಎಂದು ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಹೇಳುತ್ತೇನೆ.

ಶ್ರೀ ಪರಪ್ಪ ಕಳ್ಳಿಗುಡ್ಡ.—ಸ್ವಾಮಿ, ಈ ಬಾಳೆಕುಂದ್ರಿಯವರ ರಿಪೋರ್ಟ್ ಏನು ಇದೆ ಅದರಿಂದ ಏನೂ ಅಪಾಯ ಇಲ್ಲಾ ನೀರು ಬರುವುದಿಲ್ಲ ಎಂದು ಆ ಊರಿನ ಜನರಿಗೆ ತಿಳಿಯಪಡಿಸುತ್ತೀರಾ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಈಗ ಎಕ್ಸ್‌ಪರ್ಟ್ ಕಮಿಟಿಯವರು ಬಾಗಲಕೋಟೆ ಪಟ್ಟಣಕ್ಕೆ ಫುಲ್ ಪ್ರೊಟೆಕ್ಷನ್ ಕೊಡುವ ಬಗ್ಗೆ ಮತ್ತು ಡೈವರ್ಷನ್ ಡ್ಯಾಮ್ ಕಟ್ಟಬೇಕೆಂದು ಸೂಚನೆ ಮಾಡಿರುವುದರಿಂದ ಅದಕ್ಕಾಗಿ ೧೭ ಕೋಟಿ ರೂಪಾಯಿನ ಒಂದು ಅಂದಾಜು ಮಾಡಿದ್ದೇವೆ. ಜೊತೆಗೆ ಡ್ರೈನೇಜ್, ಛಾನಲ್ ವರ್ಕ್ಸ್ ೪೫ ಕೋಟಿ ರೂಪಾಯಿ ವೆಚ್ಚ ಅಂದಾಜು ಮಾಡಿದ್ದೇವೆ. ಇದರ ಒಟ್ಟು ವೆಚ್ಚ ೬೨ ಕೋಟಿ ರೂಪಾಯಿ ಆಗುತ್ತದೆ. ಇನ್ನು ನಾವು ಕಾಂಪನ್ಸೇಷನ್ ಕೊಡಬೇಕಾದರೆ ಅದಕ್ಕೆ ೯೦ ಕೋಟಿ ರೂಪಾಯಿ ಬೇಕಾಗುತ್ತದೆ. ಇದಕ್ಕೊಂದು ಪ್ರೊಟೆಕ್ಷನ್ ವಾಲ್ ಕಟ್ಟಬೇಕಾಗಿರುವುದರಿಂದ ಅದಕ್ಕೆ ೬೦ ಕೋಟಿ ರೂಪಾಯಿ ಖರ್ಚಾಗುತ್ತದೆ ಈ ಪ್ರೊಟೆಕ್ಷನ್ ವಾಲ್ ಮಾಡುವುದರಿಂದ ಆ ಪಟ್ಟಣದ ಜನಕ್ಕೆ ಏನೂ ತೊಂದರೆ ಯಾಗುವುದಿಲ್ಲ. ಈ ರೀತಿಯಲ್ಲಿ ಅವರು ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಗಂಗಣ್ಣ ಭೀಮಪ್ಪ.—ಸ್ವಾಮಿ ಈ ಅಪ್ಪರ್‌ಕೃಷ್ಣಾ ಬಲದಂಡೆ ಕಾಲುವೆಯನ್ನು ೧೭೨೦ ಅಡಿಗೆ ಎತ್ತರಿಸಿದರೆ ನಮಗೂ ನೀರು ಸಿಕ್ಕುತ್ತದೆ. ಈ ಬಗ್ಗೆ ರಿಪೋರ್ಟ್ ಕೊಟ್ಟಿರುವುದು ನಿಜವೇ?

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ಸೆಕೆಂಡ್ ಸ್ಟೇಜ್‌ನಲ್ಲಿ ತೆಗೆದುಕೊಂಡಾಗ ಈ ಪ್ರಶ್ನೆ ಬರುತ್ತದೆ. ಅದನ್ನು ಆರ್ಥಿಕ ಪರಿಸ್ಥಿತಿ ನೋಡಿಕೊಂಡು ತೆಗೆದುಕೊಳ್ಳಬೇಕಾಗುತ್ತದೆ.

Kabini right bank canal

246. SRI K.B. SHIVAIAH (Nanjangud).—Will the Minister of State for Major and Medium Irrigation, be pleased to state:—

(a) whether it has come to the notice of Government that the work pertaining to the Kabini Right Bank Canal has been held up due to paucity of funds ;

(b) the amount spent so far under the provision made in the Budget for the year 1980-81 for this work ;

(c) the time and the amount required for completion of this work ;

(d) the distance up to which water can be provided through this canal for agriculture purposes in June 1981 ?

SRI B.B. CHIMMANAKATTI (Minister of State for Major and Medium Irrigation).—

(a) The work of Kabini Right Bank Canal has not been held up due to paucity of funds.

(b) A sum of Rs. 500.13 lakhs had been provided for the Kabini Right Bank Canal work in the Budget for the year 1980-81. Out of which, a sum of Rs. 499.36 lakhs was spent upto the end of December 1980.

(c) As per the present estimate, the work of Kabini Right Bank Canal is expected to be completed by June 1985 and a sum of Rs. 1,983 lakhs is required for this work.

(d) It may be possible to give water upto the 68th mile in Kabini Right Bank Canal in the month of June 1981.

ಶ್ರೀ ಕೆ.ಬಿ. ಶಿವಯ್ಯ.—ಸ್ವಾಮಿ, ಈ ಪ್ರಶ್ನೆಯು (ಈ)ಗೆ ಉತ್ತರವಾಗಿ ೧೯೮೧ನೇ ಜೂನ್ ತಿಂಗಳಿನಲ್ಲಿ ಕಬಿನಿ ಬಲದಂಡೆ ನಾಲೆಯಲ್ಲಿ ೬೮ನೇ ಮೈಲಿಯವರೆಗೆ ನೀರು ಕೊಡಲು ಸಾಧ್ಯವಾಗುವುದು ಎಂದು ಹೇಳಿದ್ದೀರಿ. ಈ ಬಗ್ಗೆ ಕಳೆದ ವರ್ಷದ ಪರ್‌ಫಾರ್ಮೆನ್ಸ್ ಬಜೆಟ್ಟಿನಲ್ಲಿ ಸುಮಾರು ೬ ಕವರ್ ಡಕ್ಟ್ ಕೆಲಸಗಳನ್ನು ತೆಗೆದುಕೊಂಡಿರಿ ಅದು ಇನ್ನೂ ಪೂರ್ತಿಯಾಗಿಲ್ಲ. ಇದರಲ್ಲಿ ಪೂರ್ತಿಯಾಗದೇ ಇರತಕ್ಕಂಥಾ ಕೆಲಸವನ್ನು ಮಾನ್ಯ ಮಂತ್ರಿಗಳು ನೋಡಿಕೊಂಡು ಬಂದಿದ್ದಾರೆ. ಇನ್ನು ೫ ಕೆನ್‌ಲೈನಿಂಗ್ ಕೆಲಸಗಳೂ ಕೂಡ ಇವೆ. ಅದನ್ನು ಇನ್ನೂ ಯಾವ ಏಜೆನ್ಸಿಗೂ ಫಿಕ್ಸ್ ಮಾಡಿಲ್ಲ. ಈಗ ಉಳಿದಿರ ತಕ್ಕಂಥಾ ಕೆಲಸ ಕಾರ್ಯಗಳನ್ನು ಬೇಗನೆ ಪೂರೈಸಿ ಇನ್ನು ಎರಡು ತಿಂಗಳೊಳಗೆ ಅವರಿಗೆಲ್ಲಾ, ನೀರು ಕೊಡುವುದಕ್ಕೆ ಸಾಧ್ಯವೇ ? ಇಲ್ಲದೇ ಹೋದರೆ ಈಗ ಇರುವ ಪ್ರಕಾರ ಆವರಿಗೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲಾ. ಆದುದರಿಂದ ಈ ಬಗ್ಗೆ ಒಂದು ನಿರ್ದಿಷ್ಟವಾದ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಮ್ಮ ಯೋಜನೆ ಪ್ರಕಾರ ೧೯೮೧ನೇ ಜೂನ್ ಹೊತ್ತಿಗೆ ಸುಮಾರು ೧೨ ಸಾವಿರ ಎಕರೆಗೆ ನೀರು ಕೊಡಬೇಕಾಗಿದೆ. ೬೮ ಮೈಲಿಯವರೆಗೆ ಆ ಕೆಲಸ ಕಂಪ್ಲೀಟ್ ಮಾಡ ಬೇಕೆನ್ನುವ ಒಂದು ಅಂದಾಜು ಇಟ್ಟುಕೊಂಡಿದ್ದೇವೆ. ಆದರಲ್ಲಿ ರೈಟ್ ಬ್ಯಾಂಕ್ ಕೆನಾಲ್ ಕೆಲಸ ಮಾಡ ಬೇಕೆನ್ನುವ ಉದ್ದೇಶವೂ ಇದೆ. ಆಷ್ಟೇ ಅಲ್ಲ. ಇದರ ಜೊತೆಗೆ ಕವರ್‌ಡಕ್ಟ್‌ಸ್, ಟನಲ್ ವರ್ಕ್ಸ್ ಜೊತೆಗೆ ಕೆನಾಲ್ ವರ್ಕ್ಸ್ ಕೆಲಸವನ್ನೂ ಮಾಡಬೇಕಾಗುತ್ತದೆ. ಈ ಕೆನಾಲ್ ಕೆಲಸ ಮಾಡುವ ಸಂದರ್ಭ ವಲ್ಲಿ ಅದು ಕಂಡಿದು ಬಿದ್ದು ಆ ಬಗ್ಗೆ ೨-೩ ಸಾರಿ ಟೆಂಡರ್ ಮಾಡಿದರೂ ಕೂಡ ಅಲ್ಲಿ ಕೆಲಸ ಮಾಡಲು ಆ ಕಂಟ್ರಾಕ್ಟರಿಗೆ ತೊಂದರೆಯಾಗಿದೆ. ಅಲ್ಲಿ ಕೆಲವು ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಇರುವುದರಿಂದ ಈಗ ತಾವು ವ್ಯಕ್ತಪಡಿಸಿರುವ ಅಂಶವನ್ನೂ ಸಹ ಗಮನದಲ್ಲಿಟ್ಟುಕೊಂಡು ೧೯೮೧ನೇ ಜೂನ್ ತಿಂಗಳ ಹೊತ್ತಿಗೆ ರೈಟ್ ಬ್ಯಾಂಕ್ ಕೆನಾಲ್‌ನಲ್ಲಿ ಸುಮಾರು ೨೦ ಲಕ್ಷ ಎಕರೆಗೆ ನೀರಾವರಿ ಕೊಡುವಂಥಾ ಕೆಲಸ ಮಾಡು ತ್ತೇವೆ ಅನ್ನುವುದನ್ನು ಹೇಳುತ್ತೇನೆ.

ಶ್ರೀ ಕೆ.ಬಿ. ಶಿವಯ್ಯ.—೧೯೮೦-೮೧ಕ್ಕೆ ೫೦೦.೧೩ ಲಕ್ಷ ರೂಪಾಯಿಗಳನ್ನು ಅಳವಡಿಸಿದ್ದರಲ್ಲಿ ೧೯೯.೩೬ ಲಕ್ಷ ರೂಪಾಯಿಗಳು ಖರ್ಚಾಗಿವೆ ಎಂದು ಹೇಳಿದ್ದೀರಿ, ಇದರಲ್ಲಿ ಎಷ್ಟು ಹಣ ಸರ್ಫ್-ಸ್ಟ್ಯಾಂಡರ್ಡ್ ಕೆಲಸಕ್ಕೆ ಪಾವತಿ ಮಾಡಿದ್ದೀರಾ. ಹಾಗೆಯೇ ಓವರ್ ಮೆಷರ್‌ಮೆಂಟ್ಸ್‌ಗೆ ಎಷ್ಟು ಪಾವತಿ ಯಾಗಿದೆ, ಇಂತಿಂಥಾ ಕೆಲಸಗಳಿಗೆ ಇಷ್ಟಿಷ್ಟು ಹಣ ಪಾವತಿಯಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ತಾವು ಹೇಳಿದಂಥಾ ವರದಿ ಈಗ ಸಭೆಯ ಮುಂದೆ ಇಲ್ಲ. ಬೇಕಾದರೆ ತರಿಸಿ ವಿಚಾರ ಮಾಡುತ್ತೇನೆ.

ಶ್ರೀ ಕೆ.ಬಿ. ಶಿವಯ್ಯ.—ಈಗಿನ ಒಂದು ಅಂದಾಜಿನ ಪ್ರಕಾರ ಕಬಿನಿ ಬಲದಂಡೆಯ ನಾಲೆಯ ಕೆಲಸಗಳು ೧೯೮೧ನೇ ಜೂನ್ ಹೊತ್ತಿಗೆ ಪೂರೈಸುವುದಕ್ಕೆ ಸಾಧ್ಯವೆ ? ಹಾಗೆ ಪೂರೈಸಬೇಕಾದರೆ ಸುಮಾರು ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ನಿಮ್ಮ ಈ ಸ್ಟೇಟ್‌ಮೆಂಟ್ ಪ್ರಕಾರ ಅಷ್ಟು ದುಡ್ಡು ಖರ್ಚು ಮಾಡಿ ನೀರು ಕೊಡುತ್ತೇವೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆ ಏನೆಂದರೆ ಬಹುಶಃ ಈ ಹಣದಂಬ್ಬರದ ಒಂದು ಪರಿಸ್ಥಿತಿಯಲ್ಲಿ ನೀವು ೧೯೮೧ರ ಜೂನ್ ಹೊತ್ತಿಗೆ ಈ ಕೆಲಸವನ್ನು ಪೂರ್ತಿ ಮಾಡಲಿಕ್ಕೆ ಸಾಧ್ಯವಿಲ್ಲಾ. ಆದುದರಿಂದ ಈಗ ನೀವು ಇದಕ್ಕಾಗಿ ೫ ಕೋಟಿ ರೂಪಾಯಿ ಏನು ಕೊಟ್ಟಿದ್ದೀರೋ ಅದಕ್ಕೆ ಬದಲಾಗಿ ೧೦ ಕೋಟಿ ರೂಪಾಯಿಯನ್ನು ಸರ್ಕಾರ ಕೊಡುವುದಕ್ಕೆ ಸಾಧ್ಯವೇ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ೧೯೮೦-೮೧ಕ್ಕೆ ೫೦೦ ಲಕ್ಷ ಕೊಟ್ಟಿದ್ದೆವು, ಈಗ ಆ ಕೆಲಸ ಮುಗಿಸಬೇಕೆನ್ನುವ ಉದ್ದೇಶದಿಂದ ಇನ್ನೂ ೭೦೦ ಲಕ್ಷ ಹೆಚ್ಚಾಗಿ ಕೊಟ್ಟಿದ್ದೇವೆ. ಮುಖ್ಯವಾಗಿ ಅಲ್ಲಿ ಕೆನಾಲ್ ವರ್ಕ್ ಅನ್ನು ಮುಗಿಸಿ ಅಲ್ಲಿ ನೀರಾವರಿ ಮಾಡಬೇಕೆನ್ನುವುದೇ ಸರ್ಕಾರದ ಮುಖ್ಯ ಉದ್ದೇಶ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ಈ ಕವರ್‌ಡಕ್ಟ್ ಕೆಲಸ ಏನು ಮಾಡುತ್ತಿದ್ದಾರೆ ಅದು ಒಂದು ಕಿಲೋಮೀಟರ್‌ಗೆ ಎಷ್ಟು ಕಾಸ್ಟ್ ಆಗುತ್ತದೆ, ಮಾತ್ರ ಎಷ್ಟು ಮೈಲಿ ದೂರದವರೆಗೆ ನೀವು ಆ ಕವರ್‌ಡಕ್ಟ್ ಕೆಲಸ ಮಾಡಬೇಕೆಂದು ಇದ್ದೀರಿ. ಈ ಕವರ್‌ಡಕ್ಟ್ ಕೆಲಸಕ್ಕೆ ನೀವು ಆದ್ಯತೆ ಕೊಡುವ ದಾದರೆ ಈ ಕೆಲಸವನ್ನು ನೀವು ಹಾಕಿದ ಒಂದು ಮಿತಿಯೊಳಗೆ ಆ ಕೆಲಸ ಮುಗಿಸುವುದಕ್ಕಾಗುವುದಿಲ್ಲ.

MR. SPEAKER.—Kindly put a separate question. How can you expect the Minister to know all those details ?

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ತಾವು ಈ ಕಬಿನಿ ಕೆಲಸವನ್ನು ಯಾವಾಗ ಮುಗಿಸುತ್ತೀರಿ ? ೧.೯೫ ಲಕ್ಷ ಎಕರೆಗೆ ಏನು ನೀರು ಕೊಡುತ್ತೇವೆ ಅಂತ ಹೇಳಿದ್ದೀರಿ ಅದನ್ನು ಯಾವಾಗ ಕೊಡುತ್ತೀರಿ ಅನ್ನುವುದನ್ನು ನಿರ್ದಿಷ್ಟವಾಗಿ ಹೇಳುತ್ತೀರಾ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಆರ್ಥಿಕ ವ್ಯವಸ್ಥೆ ನೋಡಿಕೊಂಡು ಆ ಕೆಲಸವನ್ನು ಆದಷ್ಟು ಶೀಘ್ರವಾಗಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಬಿ. ಶಿವಯ್ಯ.—ಮಾನ್ಯ ಮಂತ್ರಿಗಳು ಜೂನ್ ತಿಂಗಳ ಹೊತ್ತಿಗೆ ಅಲ್ಲಿಗೆ ನೀರು ಕೊಡುವುದಕ್ಕೆ ಸಾಧ್ಯವೇ ? ನಾನು ಇದನ್ನು ಯಾವ ದೃಷ್ಟಿಯಲ್ಲಿಟ್ಟುಕೊಂಡು ಹೇಳುತ್ತಿದ್ದೇನೆಂದರೆ ಅಲ್ಲಿ ಉಪಕಾಲುವೆಗಳನ್ನೂ ಕೂಡ ಮಾಡಬೇಕಾಗುತ್ತದೆ. ಹಾಗಾದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ಆದುದರಿಂದ ಈ ಉಪಕಾಲುವೆಗಳನ್ನೂ ಮುಗಿಸಿ ಜೂನ್ ತಿಂಗಳ ಹೊತ್ತಿಗೆ ಎಲ್ಲಾ ಕೆಲಸಗಳನ್ನೂ ಮುಗಿಸಿ ನೀರು ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಆ ಕೆಲಸದ ಜೊತೆಗೆ ಉಪಕಾಲುವೆ ಕೆಲಸಗಳನ್ನೂ ಕೂಡ ಮಾಡುತ್ತೇವೆ. ಒಟ್ಟಿನಲ್ಲಿ ಅದನ್ನು ನೀರಾವರಿ ಪ್ರದೇಶ ಮಾಡಬೇಕೆನ್ನುವುದೇ ಸರ್ಕಾರದ ಮುಖ್ಯ ಉದ್ದೇಶವಾಗಿದೆ.

Land Reforms Act of Karnataka for Ex-Servicemen.

340. SRI N.B. SIRDESAI (Khanapur).—Will the Chief Minister be pleased to state:—

(a) whether the Ex-Servicemen of Karnataka have individually and jointly submitted representations to the Chief Minister of Karnataka and to the Karnataka Legislative Assembly through petitions regarding the injustices inflicted upon them due to the enactment of restrictive legislation in the Land Reforms Act of Karnataka ;